**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ</u>**
**<u>ಸಿ.ಸಿ.389/2022</u>**

| | | |
|---|---|---|
| ಸಾಕ್ಷಿದಾರರ ಹೆಸರು | : ಪ್ರದೀಪ್ ಕುಮಾರ್ | ಫ್ರಾಸಾ -3 |
| ತಂದೆಯ ಹೆಸರು | : ಲಕ್ಷ್ಮಣಗೌಡ | ಚಾಸಾ-4 |
| ವಯಸ್ಸು | : 48 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯವಸಾಯ | ದಿನಾಂಕಃ13.01.2025. |
| ವಾಸಸ್ಥಳ | : ಕಿತ್ಲೇಗಂಡಿ | |

**<u>:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:</u>**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಪರಿಚಯ ಇದೆ. ಅವರು ನಮ್ಮ ಊರಿನವರು. ಚಾಸಾ-1, 2, 4 ಮತ್ತು 6 ರವರ ಪರಿಚಯ ನನಗಿದೆ.

ದಿ.18.11.2021 ರಂದು ರಾ.10.00 ಗಂಟೆ ಸಮಯಕ್ಕೆ ಆರೋಪಿಯು ಚಾಸಾ-1 ರವರ ಮನೆಗೆ ಹೋಗಿ ಅವರನ್ನು ಬಲತ್ಕಾರ ಮಾಡಲು ಪ್ರಯತ್ನಪಟ್ಟಿರುತ್ತಾರೆ ಹಾಗೂ ಆ ಸಮಯಕ್ಕೆ ಆರೋಪಿಯು ಚಾಸಾ-1 ರವರಿಗೆ ಕೈಯಿಂದ ಹೊಡೆದು, ಅವರ ಬಟ್ಟೆ ಹರಿದು ನಿನ್ನ ಗಂಡನಿಗೆ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ ಎಂದು ಚಾಸಾ-2 ರವರು ಮರುದಿನ ಅಂದರೆ ದಿ.19.11.2021 ರಂದು ನನಗೆ ಹೇಳಿದರು. ನಂತರ ನಾನು, ಚಾಸಾ-5 ಮತ್ತು 6 ಹಾಗೂ ಊರಿನವರು ಚಾಸಾ-1 ರವರ ಮನೆಗೆ ಹೋಗಿ ಚಾಸಾ-1 ರವರನ್ನು ವಿಚಾರಿಸಿದಾಗ ಅವರು ಸಹಾ ಮೇಲೆ ಹೇಳಿದ ವಿಚಾರವನ್ನು ನಮ್ಮ ಬಳಿ ಹೇಳಿದರು. ಆರೋಪಿಯನ್ನು ಕರೆಸಿ ನಾವು ಬುದ್ದಿ ಹೇಳಿ, ಬಾಡಿಗೆ ಮನೆ ಖಾಲಿ ಮಾಡಿ ಬೇರೆ ಕಡೆ ಹೋಗುವಂತೆ ಹೇಳಿದ್ದೆವು. ಆದರೂ ಸಹಾ ಆರೋಪಿಯೂ ಬೇರೆ ಕಡೆ ಹೋಗದೇ ಚಾಸಾ-1 ರವರಿಗೆ ಹಾಗೂ ಊರಿನವರಿಗೆ ತೊಂದರೆ ಕೊಡುತ್ತಿದ್ದಾರೆ.

ದಿ.21.11.2021 ರಂದು ಚಾಸಾ-1 ರವರು ವಿಷ ಕುಡಿದಿರುವುದಾಗಿ ನನಗೆ ತಿಳಿಯಿತು. ಅವರನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಬಂದು ಅಲ್ಲಿಂದ ಹಾಸನದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಮನೆಗೆ ಕರೆದುಕೊಂಡು ಬಂದಿದ್ದಾರೆ. ಪೋಲಿಸರು ನನ್ನನ್ನು ವಿಚಾರಿಸಿದಾಗ ದಿ.04.12.2021 ರಂದು ಮೇಲಿನ ವಿಚಾರವನ್ನೇ ಪೋಲಿಸರ ಬಳಿ ಹೇಳಿದ್ದೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲು: ಆರೋಪಿ ಪರ ಶ್ರೀ ಎಂ.ಎಂ.ಆರ್. ವಕೀಲರಿಂದ:</u>**

ಈ ದಿನ ಚಾಸಾ-2 ರವರು ನನ್ನೊಂದಿಗೆ ನ್ಯಾಯಾಲಯಕ್ಕೆ ಬಂದಿದ್ದಾರೆ ಎಂದರೆ ಸರಿ. ನನ್ನ ಹೆಸರಿಗೆ ಕಿತ್ತಲೆಗಂಡಿ ಗ್ರಾಮದಲ್ಲಿ 10-15 ಎಕರೆ ಜಮೀನು ಇದೆ. ಚಾಸಾ-1 ಮತ್ತು 2 ರವರು ನನ್ನ ತೋಟಕ್ಕೆ

ಕೆಲಸಕ್ಕೆ ಬರುತ್ತಾರೆ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರು ಸುಮಾರು 10-15 ವರ್ಷಗಳಿಂದ ಕಿತ್ತಲೇಗಂಡಿಯಲ್ಲಿ ವಾಸಿಸುತ್ತಿದ್ದಾರೆ. ನಾನು ಕಿತ್ತಲೇಗಂಡಿಯ ಖಾಯಂ ವಾಸಿ ಎಂದರೆ ಸರಿ. ಪ್ರಕರಣದ ಬಗ್ಗೆ ನಿಮಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದೂರವಾಣಿ ಮೂಲಕ ತಿಳಿಸಿರುವ ಮಾಹಿತಿ ಇದೆ ಎಂದು ನುಡಿಯುತ್ತಾರೆ. ದಿ.19.11.2021 ರಂದು ಬೆ.8.30 ರ ಸಮಯಕ್ಕೆ ಚಾಸಾ-2 ರವರು ದೂರವಾಣಿ ಕರೆ ಮಾಡಿ ವಿಷಯ ಹೇಳಿದ್ದರು. ಚಾಸಾ-5 ಮತ್ತು 6 ರವರ ಮನೆ ನಮ್ಮ ಮನೆಯ ಬಳಿಯೇ ಇದ್ದು ಚಾಸಾ-2 ರವರೊಂದಿಗೆ ನಾವೆಲ್ಲರೂ ಒಟ್ಟಿಗೆ ಹೋಗಿದ್ದೆವು. ನಾವು ಚಾಸಾ-1 ರವರನ್ನು ನೋಡಿದಾಗ ಯಾವುದೇ ಗಾಯಗಳು ಕಾಣುತ್ತಿರಲಿಲ್ಲ ಆದರೆ ಅವರು ದುಃಖದಲ್ಲಿ ಇದ್ದರು.

ಎಡಭಾಗದಲ್ಲಿ ಹರಿದಿದ್ದ ನೈಟಿಯನ್ನು ನಾನು ಚಾಸಾ-1 ರವರ ಮನೆಯಲ್ಲಿ ನೋಡಿದ್ದೆ. ನೈಟಿಯ ಬಣ್ಣ ಹೇಳಲಾಗುವುದಿಲ್ಲ ಆದರೆ ಅದರ ಮೇಲೆ ಹೂವು ಮತ್ತು ಅಡ್ಡಗೆರೆಗಳು ಇದ್ದವು. ನೈಟಿಯು ಎಷ್ಟು ಉದ್ದ ಹರಿದುಹೋಗಿತ್ತು ಎಂದು ನಾನು ಅಳತೆ ಮಾಡಿಲ್ಲ. ಆರೋಪಿಯನ್ನು ಚಾಸಾ-1 ರವರ ಮನೆಯ ಮುಂಬದಿ ಇರುವ ರಸ್ತೆಯ ಬಳಿ ಕರೆಸಿ ಬೆ.10.00 ರಿಂದ 10.30 ರವರೆಗೂ ಮಾತನಾಡಿದೆವು. ಆರೋಪಿಯು ಚಾಸಾ-1 ರವರಿಗೆ ತೊಂದರೆ ಕೊಡುತ್ತಿದ್ದರ ಎಂದು ದಿ.19.11.2021 ರ ಪೂರ್ವದಲ್ಲಿ ನನಗೆ ತಿಳಿದಿರಲಿಲ್ಲ. ಆರೋಪಿಯಿಂದ ಯಾವುದೇ ಮುಚ್ಚಳಿಕೆ ಪತ್ರ ಬರೆಸಿಕೊಂಡಿಲ್ಲ. ಎರಡು ವರ್ಷದಿಂದ ಆರೋಪಿಯು ಕಿರುಕುಳ ಕೊಡುತ್ತಿದ್ದರು ಎಂದು ಚಾಸಾ-1 ರವರು ನಮ್ಮ ಬಳಿ ಹೇಳಿದ್ದರು. ನಾವು ಪಂಚಾಯಿತಿ ಮಾಡುವ ಮುನ್ನ ಹಾಗೂ ನಂತರ ಚಾಸಾ-1 ರವರು ಪೋಲಿಸ್ ಠಾಣೆಗೆ ಹೋಗಿದ್ದ ವಿಚಾರ ಗೊತ್ತಿದೆಯಾ ಎಂದರೆ ಸಾಕ್ಷಿಯು ಪಂಚಾಯಿತಿಗೂ ಮುನ್ನ ಹೋಗಿದ್ದಾರ ಎಂದು ನನಗೆ ಗೊತ್ತಿಲ್ಲ, ಆದರೆ ಪಂಚಾಯಿತಿ ನಂತರ ಠಾಣೆಗೆ ಹೋಗಿರುವುದಾಗಿ ಗೊತ್ತಿದೆ ಎಂದು ನುಡಿಯುತ್ತಾರೆ.

ಚಾಸಾ-1 ರವರು ಯಾವುದೋ ಪುಡಿಯನ್ನು ಕುಡಿದಿದ್ದಾರೆ ಎಂದು ಚಾಸಾ-2 ರವರು ದಿ.22.11.2021 ರಂದು ದೂರವಾಣಿ ಮೂಲಕ ನಮಗೆ ಹೇಳಿದರು. ಆನಂತರ ನಾನು ಚಾಸಾ-1 ರವರ ಆರೋಗ್ಯದ ಬಗ್ಗೆ ವಿಚಾರಿಸಲು ಹೋಗಿಲ್ಲ. ದಿ.04.12.2021 ರಂದು ಪ್ರಕರಣ ದಾಖಲಾಗಿರುವ ವಿಚಾರ ನನಗೆ ತಿಳಿಯಿತು. ಆ ದಿನ ಬೆ.ಸುಮಾರು 11.30 ರ ಸಮಯಕ್ಕೆ ನಾನು, ಚಾಸಾ-4 ಮತ್ತು 6 ರವರು ಪೋಲಿಸ್ ಠಾಣೆಗೆ ಹೋಗಿದ್ದೆವು. ಠಾಣೆಗೆ ಬರುವಂತೆ ಪೋಲಿಸರೇ ಹೇಳಿದ್ದರು. ಮಲ್ಲಿಕಾರ್ಜುನ್ ಎನ್ನುವವರು ನಮ್ಮ ಹೇಳಿಕೆಯನ್ನು ಟೈಪ್ ಮಾಡಿಕೊಂಡಿದ್ದಾರೆ. ಹೇಳಿಕೆಗೆ ಸಹಿ ಮಾಡಿದ್ದೆ. ಚಾಸಾ-1 ಮತ್ತು 2 ರವರು ನನ್ನ ಆತ್ಮೀಯರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಕೊಡದೇ ಇದ್ದರೂ ಸಹಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ ಒಂದಕ್ಕೊಂದು ಸಂಬಂಧ ಇಲ್ಲ

ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.